**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 4164/2022**
**ಚಾಸಾ - 03 / ಪ್ರಾಸಾ - 04**

| | |
|---|---|
| ಹೆಸರು | **ಲಕ್ಷ್ಮಿ** |
| ಗಂಡನ ಹೆಸರು | **ನರಸಿಂಹಮೂರ್ತಿ** |
| ವಯಸ್ಸು | **52** |
| ಉದ್ಯೋಗ | **ಗೃಹಿಣಿ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 03-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ದಿಃ 18-05-2022 ರಂದು ಬೆಳಿಗ್ಗೆ ಸುಮಾರು 11.30 ರಿಂದ 12.30 ರ ಸಮಯದಲ್ಲಿ ಪಂಚನಾಮೆಯನ್ನು ಮಾಡಿದ ಸ್ಥಳದಲ್ಲಿ ನಾನು ನನ್ನ ಸಹಿಯನ್ನು ನಿಪಿ-2 ಕ್ಕೆ ಮಾಡಿರುತ್ತೇನೆ. ಸೈಟಿನ ವಿಷಯಕ್ಕೆ ಸಂಬಧಿಸಿದಂತೆ ಗಲಾಟೆಯಾಗಿರುವ ಬಗ್ಗೆ ಪಂಚನಾಮೆಯನ್ನು ಮಾಡುವಾಗ ನನ್ನ ಸಹಿಯನ್ನು ಪಡೆದುಕೊಂಡರು. ನನ್ನ ಜೊತೆ ನಿಪಿ-2 ಕ್ಕೆ ಪ್ರಾಸಾ-1 ಮತ್ತು 2 ರವರು ಸಹಿಯನ್ನು ಮಾಡಿದರು. ಪಂಚನಾಮೆಯನ್ನು ಮಾಡುವಾಗ ಪೋಲೀಸರು ಕಲ್ಲನ್ನು ವಶಪಡಿಸಿಕೊಂಡರು. ಈಗ ಸಾಕ್ಷಿಗೆ ಮುದ್ದೇಮಾಲು-1 ನ್ನು ತೋರಿಸಿದ್ದು, ಅದನ್ನು ಪಂಚನಾಮೆಯನ್ನು ಮಾಡುವ ಸಮಯದಲ್ಲಿ ವಶಪಡಿಸಿಕೊಳ್ಳಲಾಗಿದೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖಿವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿಃ18-05-2022 ರಂದು ಬೆಳಿಗ್ಗೆ 11.000 ರಿಂದ 11.45 ರ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಪೋಲೀಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಆರ್.ಎಸ್, ವಕೀಲರಿಂದಃ-**

ನನ್ನ ಮನೆಯಿಂದ ಪಂಚನಾಮೆಯನ್ನು ಮಾಡಿದ ಸ್ಥಳಕ್ಕೆ ಸುಮಾರು 20 ಕಿ.ಮೀ ನಷ್ಟು ಅಂತರ ಇದೆ. ಪಂಚನಾಮೆಗೆ ಬರುವಂತೆ ಹೇಳಿ ಪೋಲೀಸರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಪ್ರಾಸಾ-1 ರವರು ನನ್ನ ದೂರದ ಸಂಬಂಧಿ. ನಾನು ಮತ್ತು ನನ್ನ ತಂದೆಯಾದ ಚಿಕ್ಕತಿಮ್ಮಗೌಡರವರು ಹೊನಗನಹಟ್ಟಿಯಲ್ಲಿ ಇರುವ ರಾಯರ ಮಠಕ್ಕೆ ಹೋಗುತ್ತಿದ್ದಾಗ ಅಲ್ಲಿ ಪೋಲೀಸರು ಇದ್ದರು, ನಾವು ಅವರನ್ನು ಕೇಳಿದಾಗ ಅವರು ಗಲಾಟೆಯ ವಿಷಯಕ್ಕೆ ಪಂಚನಾಮೆಯನ್ನು ಮಾಡಲು ಬಂದಿರುವುದಾಗಿ ತಿಳಿಸಿದರು ಮತ್ತು ನನ್ನನ್ನು ಸಾಕ್ಷಿಯಾಗುವಂತೆ ಕೇಳಿದರು. ನಿಪಿ-2 ನ್ನು ಬೆರಳಚ್ಚು ಮಾಡುವುದನ್ನು ನಾನು ನೋಡಿರುವುದಿಲ್ಲ, ಆದರೆ ಅಲ್ಲಿ ಲ್ಯಾಪ್ ಟಾಪ್ ನ್ನು ಇಟ್ಟುಕೊಂಡಿದ್ದರು.

ನಾನು ಡಿಪ್ಲೋಮಾ ಇನ್ ಸೆಕ್ರಟರ್ ನ್ನು ವ್ಯಾಸಂಗ ಮಾಡಿದ್ದೇನೆ. ನನಗೆ ಕಂಪ್ಯೂಟರ್ ಬಗ್ಗೆ ಅನುಭವ ಇದೆ. ಯಾವುದೇ ಲ್ಯಾಪ್ ಟಾಪ್ ನಲ್ಲಿ ಟೈಪನ್ನು ಮಾಡಿದರೆ ಅದನ್ನು ವಿದ್ಯುತ್ ಇರುವ ಜಾಗದಲ್ಲಿ ಪ್ರಿಂಟರ್ ಮುಖಾಂತರ ಪ್ರಿಂಟನ್ನು ಮಾಡಬೇಕು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮಗೆ ನಿಪಿ-2 ನ್ನು ಎಲ್ಲಿ ಪ್ರಿಂಟ್ ಮಾಡಲಾಗಿದೆ ಎಂದು ಗೊತ್ತಿಲ್ಲ ಎಂದರ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ನಿಪಿ-2 ಕ್ಕೆ ಪೋಲೀಸ್ ಠಾಣೆಯಿಲ್ಲಿ ನಿಮ್ಮ ಸಹಿಯನ್ನು ಮಾಡಿರುತ್ತೀರಾ ಎಂದರ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-2 ರಲ್ಲಿ ಇರುವ ವಿಷಯವನ್ನು ನನಗೆ ಸಂಪೂರ್ಣವಾಗಿ ಹೇಳಲು ಆಗುವುದಿಲ್ಲ. ಪ್ರಾಸಾ-1 ಮತ್ತು 2 ರವರು ನಿಮ್ಮ ಸಂಬಂಧಿಕರಾಗಿರುವುದರಿಂದ ಅವರು ನಿಮ್ಮನ್ನು

ಪೋಲೀಸ್ ಠಾಣೆಗೆ ಕರೆದುಕೊಂಡು ನಿಪಿ-2 ಕ್ಕೆ ಸಹಿಯನ್ನು ಮಾಡಿಸಿರುತ್ತಾರೆ ಎಂದರ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-2 ನ್ನು ಚಾಸಾ-7 ರವರು ಬೆರಳಚ್ಚು ಮಾಡಿರುತ್ತಾರೆ. ನನಗೆ ಪಂಚನಾಮೆಯನ್ನು ಮಾಡಿದ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ.

3. ಇಂದು ನಿಮ್ಮ ಜೊತೆ ಪ್ರಾಸಾ-1 ರವರು ಸಹ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರಾಸಾ-1 ರವರು ನಿಮ್ಮನ್ನು ಇಂದು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರ ಸಾಕ್ಷಿಯು ಇಬ್ಬರೂ ಜೊತಯಲ್ಲಿಯೇ ಬಂದಿದ್ದೇವೆ ಮತ್ತು ಇಂದು ಪ್ರಾಸಾ-1 ರವರ ಸಾಕ್ಷಿ ವಿಚಾರಣೆಯೂ ಸಹ ಇದೆ ಎನ್ನುತ್ತಾರೆ. ಮುದ್ದೇಮಾಲು-1 ನ್ನು ಪೋಲೀಸರಿಗೆ ಯಾರು ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿಲ್ಲ, ಮುದ್ದೇಮಾಲು-1 ನ್ನು ವಶಪಡಿಸಿ ಕೊಂಡಿರುವುದಿಲ್ಲ ಮತ್ತು ಪ್ರಾಸಾ-1 ಮತ್ತು 2 ರವರು ನಿಮ್ಮ ಸಂಬಂಧಿಕರಾಗಿರುವ ಕಾರಣದಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**